ಟೀಚರ್: ಚೀನಾದ ಮಹಾಗೋಡೆಯನ್ನು ವಿಶ್ವದ ಏಳು ಅದ್ಭುತಗಳಲ್ಲೊಂದಾಗಿ ಏಕೆ ಪರಿಗಣಿಸಲಾಗುತ್ತಿದೆ?
ಗುಂಡ: ಏಕೆಂದರೆ, ಇಷ್ಟು ಸುದೀರ್ಘ ಸಮಯ ಬಾಳಿಕೆ ಬಂದ ಪ್ರಪ್ರಥಮ ಹಾಗೂ ಏಕಮೇವಾದ್ವಿತೀಯ ಚೀನೀ ಉತ್ಪನ್ನವಾಗಿದೆ!

★★★

ಅಮ್ಮ: ಯಾಕೋ ಗುಂಡ ಅಳ್ತಿದ್ದೀಯಾ?
ಗುಂಡ: ನನ್ನನ್ನು ಶಾಲೆಯಿಂದ ತೆಗೆದುಹಾಕಿದರು.
ಅಮ್ಮ: ಅದ್ಯಾಕೋ, ನೀನೇನಾದರೂ ಜಗಳ ಮಾಡಿದ್ಯಾ?
ಗುಂಡ: ಇಲ್ಲಮ್ಮಾ, ನಾನು ಕೇವಲ ಸೊಳ್ಳೆ ಹೊಡಿಯುತ್ತಿದ್ದೆ ಅಷ್ಟೇ.
ಅಮ್ಮ: ಓಹೋ, ಪಾಠ ಕೇಳದೆ ಸೊಳ್ಳೆ ಹೊಡೆಯುತ್ತಿದ್ದುದ್ದಕ್ಕೆ ಶಾಲೆಯಿಂದ ತೆಗೆದುಹಾಕಿದರೋ?
ಗುಂಡ: ಇಲ್ಲಮ್ಮಾ, ಒಂದೇ ಸೊಳ್ಳೆ ನಾನು ಹೊಡೆದದ್ದು!
ಅಮ್ಮ: ಒಂದು ಸೊಳ್ಳೆ ಹೊಡೆದದ್ದಕ್ಕೆ ಶಾಲೆಯಿಂದ ತೆಗೆದು ಹಾಕ್ತಾರೇನೋ?
ಗುಂಡ: ಮತ್ತೆ... ಆ ಸೊಳ್ಳೆ ಶೈಲಾ ಟೀಚರ್ ಅವರ ಕೆನ್ನೆ ಮೇಲೆ ಕೂತಿತ್ತು

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್**, ಮುಂಬೈ



ಹೆಂಡತಿ (ಸಿಟ್ಟಿನಿಂದ): ನಿಮ್ಮನ್ನು ಮದುವೆ ಆಗೋ ಬದಲು ನಾನು ಒಬ್ಬ ರಾಕ್ಷಸನನ್ನು ಮದುವೆ ಆಗಿದ್ರೂ ಎಷ್ಟೋ ಸುಖವಾಗಿರ್ತಿದ್ದೆ.
ಗಂಡ: ಹಾಗೆಲ್ಲಾ ರಕ್ತ ಸಂಬಂಧದಲ್ಲಿ ಮದುವೆ ಆಗಬಾರದು ಕಣೇ, ಒಳ್ಳೆದಲ್ಲ!

★★★

ಸೋಮ: ನಿಂಗೆ ಎಷ್ಟು ಮಕ್ಳು?
ಗುಂಡ: 12. ಪುನಃ ಗರ್ಭಿಣಿ.
ಸೋಮ: ಅಷ್ಟೊಂದು ಮಕ್ಳ?
ಗುಂಡ: ಹೆಂಡ್ತಿನ ಯಾವತ್ತೂ ಖಾಲೀ ಹೊಟ್ಟೇಲಿ ಇಡಲ್ಲಂತ ಮಾವನಿಗೆ ಮಾತು ಕೊಟ್ಟಿದ್ದೀನಿ.

★★★

ಮದುವೆಯ ಮನೆಯಲ್ಲಿ ಚಪ್ಪಲಿ ಕಳೆದುಕೊಂಡು ವನ ಕವಿತೆ. ಒಂದು ಜೋಡಿ ಸೇರುವುದನ್ನು ನೋಡಲು ಬಂದು, ಇನ್ನೊಂದು ಜೋಡಿ ಕಳೆದುಕೊಂಡೆ.

★★★

ಹೆಲ್ಮೆಟ್ ಮತ್ತು ಹೆಂಡತಿ ಇಬ್ಬರ ಸ್ವಭಾವ ಒಂದೇ.
ತಲೆ ಮೇಲೆ ಇಟ್ಟು ಕೊಂಡ್ರೆ ನೀವು ಸೇಫ್ ಆಗಿರ್ತೀರಿ.

★★★

ಅಪಘಾತ ವಲಯದ ಸೂಚನಾ ಫಲಕದಲ್ಲಿ ಹೊಸ ಸಾಲು.
ಎಚ್ಚರಿಕೆ, ನಿಧಾನವಾಗಿ ಹೋಗದಿದ್ದಲ್ಲಿ, ನಿಧನವಾಗಿ ಹೋಗ್ತೀರ.

(ಸಂಗ್ರಹ) **ಶಿವಮೊಗ್ಗ ರಮೇಶ್**, ಮೈಸೂರು

ಸರ್ವೇಜನಃ ಸುಖಿನೋ ಭವಂತುಃ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.